# ಹೊಸ ಆಶಾಕಿರಣ

ತೃತೀಯ ಸಹಸ್ರಮಾನದ ಮೊದಲ ವರ್ಷವನ್ನು ದುರಂತಮಯ ವರ್ಷ ಎಂದು ಬಣ್ಣಿಸಿದರೆ ತಪ್ಪಾಗಲಾರದು. ಐಟಿ ಕ್ಷೇತ್ರದ ಮಟ್ಟಿಗಂತೂ ಇದು ಸತ್ಯ. ಡಾಟ್‌ಕಾಮ್ ದುರಂತದ ಕಹಿ ಅನುಭವ ಮತ್ತು ಆರ್ಥಿಕ ಹಿನ್ನಡೆಗಳ ಬೆನ್ನಹಿಂದೆಯೇ ಸಂಭವಿಸಿದ ಸೆಪ್ಟೆಂಬರ್ 11ರ ದುರಂತ, ಐಟಿ ಕ್ಷೇತ್ರಕ್ಕೆ ವಿಪತ್ಕಾರಿಯಾಗಿ ಪರಿಣಮಿಸಿತು.

ಕಳೆದ ವರ್ಷದಿಂದ ಮುಂದುವರಿದು, ಈ ವರ್ಷದ ಮೊದಲ ಭಾಗದಲ್ಲಿ ಡಾಟ್‌ಕಾಮ್ ಕ್ರಾಂತಿಯ ಮಿಥ್ಯದ ಪೂರ್ಣ ಅರಿವು ಜನರಿಗಾಯಿತು. ಸರಿಸುಮಾರು ಇದೇ ಸಮಯಕ್ಕೆ ಆರ್ಥಿಕ ಹಿನ್ನಡೆಯ ಪೂರ್ಣ ಪರಿಚಯ ಪ್ರಪಂಚದೆಲ್ಲೆಡೆ ಕಾಣಲಾರಂಭಿಸಿತು. ತಂತ್ರಜ್ಞಾನ ಕ್ಷೇತ್ರದ ಯಾವುದೇ ಬೆಳವಣಿಗೆ- ಬದಲಾವಣೆಗಳು ಭಾರತಕ್ಕೆ ಮುಟ್ಟುವುದು ಸ್ವಲ್ಪ ನಿಧಾನವೇ ಆದರೂ ಜಾಗತೀಕರಣದ ಈ ವಾತಾವರಣದಲ್ಲಿ ಆರ್ಥಿಕ ಹಿನ್ನಡೆಯ ಬಿಸಿ ಭಾರತವನ್ನು ತಲುಪುವುದು ಅಷ್ಟೇನೂ ತಡವಾಗಲಿಲ್ಲ. ಇದರ ಪರಿಣಾಮ ಅಮೆರಿಕದ 'ಹೈರ್ ಆ್ಯಂಡ್ ಫೈರ್' ಸಂಸ್ಕೃತಿಯ ಪ್ರತ್ಯಕ್ಷ ದರ್ಶನ ಭಾರತದಲ್ಲೂ ಕಾಣಲಾರಂಭಿಸಿತು.

ಡಾಟ್‌ಕಾಮ್ ದುರಂತದೊಂದಿಗೇ ಬಂದೊದಗಿದ ಈ ಆರ್ಥಿಕ ಇಳಿಮುಖ ಅನೇಕ ಕಂಪನಿಗಳಿಗೆ ಮಾರಕವಾಯಿತು. ಅನೇಕ ಪ್ರತಿಭಾವಂತ ತಂತ್ರಜ್ಞರು ಉದ್ಯೋಗ ಕಳೆದುಕೊಳ್ಳಬೇಕಾಯಿತು. ಹಲವು ಕಂಪನಿಗಳು ಉದ್ಯೋಗಗಳನ್ನು ಕಡಿತಗೊಳಿಸಿದರೆ, ಇನ್ನು ಕೆಲವು ಕಂಪನಿಗಳು ತಮ್ಮ ಉದ್ಯೋಗಿಗಳನ್ನು ಉಳಿಸಿಕೊಳ್ಳಲು ಅವರ ವೇತನಗಳನ್ನು ಕಡಿತಗೊಳಿಸಿದವು. ಈ ಹಿನ್ನಡೆಯ ಅತಿ ಭಯಾನಕ ಪರಿಣಾಮವೆಂದರೆ ಅನೇಕ ಯುವ ಪ್ರತಿಭಾವಂತರಿಂದು ನಿರುದ್ಯೋಗಿಗಳಾಗಿರುವುದು. ಅಷ್ಟೇ ಅಲ್ಲದೆ, ಹೊಸ ಪದವೀಧರರು ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸುವ ಮೊದಲೇ ಹತಾಶರಾಗಿರುವುದು.

ಭಾರತೀಯ ಐಟಿ ಸಮುದಾಯಕ್ಕೆ ಇವೆಲ್ಲದರೊಂದಿಗೆ ಇನ್ನೊಂದು ದೊಡ್ಡ ದುರಂತ ಕಾದಿತ್ತು. ಆರ್ಥಿಕ ಹಿನ್ನಡೆಯ ಕಾರ್ಮೋಡ ಕವಿಯುತ್ತಿದ್ದಂತೆ, ಭಾರತದ ಐಟಿಯ ನಾಗಾಲೋಟದ ರೂವಾರಿಯಾಗಿದ್ದ ನ್ಯಾಸ್‌ಕಾಮ್ (NASSCOM) ಅಧ್ಯಕ್ಷ ದೇವಾಂಗ್ ಮೆಹತಾರ ಆಕಸ್ಮಿಕ ಮರಣದ ಸುದ್ದಿಯು ಸಿಡಿಲಂತೆ ಅಪ್ಪಳಿಸಿತು. ವಿಶ್ವದೆಲ್ಲೆಡೆ ಐಟಿ ಕ್ಷೇತ್ರವು ಎದುರಿಸುತ್ತಿದ್ದ ಹಿನ್ನಡೆಯಲ್ಲೂ ದೇವಾಂಗ್ ಮೆಹತಾರ ಆತ್ಮವಿಶ್ವಾಸ ಹಾಗೂ ಅದಮ್ಯ ಉತ್ಸಾಹಗಳು ಭಾರತೀಯ ಐಟಿ ಕಂಪೆನಿಗಳನ್ನು ಸಕಾರಾತ್ಮಕ ಮನಸ್ಥಿತಿಯಲ್ಲಿರಿಸಿತ್ತು. ಅವರ ನಿಧನ ಭಾರತೀಯ ಐಟಿಗೆ ನಿಜಕ್ಕೂ ಒಂದು ತುಂಬಲಾರದ ನಷ್ಟ. ಆದರೆ ಈ ಆಘಾತದಿಂದ ಬೇಗನೇ ಚೇತರಿಸಿಕೊಂಡ ನ್ಯಾಸ್‌ಕಾಮ್ ಈ ಮುನ್ನ 2008ಕ್ಕೆ ಭಾರತದ ಸಾಫ್ಟ್‌ವೇರ್‌ನ ರಫ್ತು ಗುರಿಯಲ್ಲಿ ಯಾವುದೇ ಬದಲಾವಣೆಯಿಲ್ಲ ಎಂದು ಮರುಘೋಷಿಸಿರುವುದು ಭಾರತೀಯ ಐಟಿಗೆ ಮತ್ತೆ ಚೈತನ್ಯ ತುಂಬಿದೆ. ದೇವಾಂಗ್ ಮೆಹತಾರ ಸ್ಥಾನಕ್ಕೆ ಈಗ ಬಂದಿರುವ ಡಿಸ್ಕವರಿ ಚಾನಲ್‌ನ ಮಾಜಿ ನಿರ್ದೇಶಕ ಶ್ರೀಕಾರ್ಣಿಕ್ ಕೂಡ ಒಬ್ಬ ಸಮರ್ಥ ಅಧಿಕಾರಿ. ಇವರ ನೇತೃತ್ವದಲ್ಲಿ ಭಾರತೀಯ ಐಟಿ ಇನ್ನೂ ಹೆಚ್ಚು ವೇಗದಲ್ಲಿ ಬೆಳೆಯುವುದೆಂಬ ಭರವಸೆಯನ್ನು ಮೂಡಿಸಿದೆ.

ಇವೆಲ್ಲದರ ಹಿಂದೆ ವರ್ಷದ ಕೊನೆಯ ಭಾಗದಲ್ಲಿ ಅಮೆರಿಕದ ವಿಶ್ವ ವಾಣಿಜ್ಯ ಸಂಸ್ಥೆಯ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯು, ಮೊದಲೇ ಶಿಥಿಲಗೊಂಡಿದ್ದ ಐಟಿ ಬುನಾದಿಯನ್ನು ಇನ್ನಷ್ಟು ಅಲುಗಾಡಿಸಿತು. ವರ್ಷದ ಕೊನೆಯ ಭಾಗದಲ್ಲಿ ಆರ್ಥಿಕ ಪರಿಸ್ಥಿತಿ ಮೇಲ್ಮುಖ ಕಾಣಬಹುದೆಂಬ ನಿರೀಕ್ಷೆಗಳನ್ನು ಇದು ನುಚ್ಚುನೂರು ಮಾಡಿತು. ಈ ದುರಂತದ ಹಿಂದೆಯೇ ಪ್ರಾರಂಭವಾದ ಯುದ್ಧ ಹಾಗೂ ಅದರಿಂದಾಗಬಹುದಾದ ಆರ್ಥಿಕ ಪರಿಣಾಮಗಳು, ಹಿನ್ನಡೆಯ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದವು.

ಆದರೆ, 2002ಕ್ಕೆ ನಾವು ಕಾಲಿಡುತ್ತಿರುವಂತೆ ಆರ್ಥಿಕ ಪರಿಸ್ಥಿತಿ ಹಾಗೂ ಐಟಿ ಕ್ಷೇತ್ರದ ಮುನ್ನಡೆಯ ಆಶಾಕಿರಣ ಮೂಡಿದೆ. ಈ ಎಲ್ಲಾ ದುರಂತಗಳ ಮಧ್ಯೆಯೂ ಹೊಸ ಉತ್ಪನ್ನಗಳ ಬೇಡಿಕೆ ಕಡಿಮೆಯಾಗಿಲ್ಲ. ಹಾಗೆಯೇ ದೊಡ್ಡ ಕಂಪನಿಗಳ ಹಣ ಹೂಡಿಕೆಯ ಪ್ರಮಾಣವೂ ಹೆಚ್ಚಾಗಿದೆ. ಐಟಿ ವಿಶ್ಲೇಷಕರು ಹೇಳುವಂತೆ ಐಟಿ ಕ್ಷೇತ್ರವು ವಿಷಮ ಪರಿಸ್ಥಿತಿಯ ಅಂತ್ಯ ಮುಟ್ಟಿಯಾಗಿದೆ, ಈಗ ಏನಿದ್ದರೂ ಅದು ಮೇಲಕ್ಕೆ ಮಾತ್ರ ಹೋಗಲು ಸಾಧ್ಯ. ಇದು ಐಟಿ ಸಮುದಾಯದಲ್ಲಿ ಹೊಸ ಆಶಾಭಾವನೆ ಮೂಡಿಸಿದೆ. ●

ಜಿ.ಪಿ. ವಿನಯಬಾಬು